ಉಲ್ಲಂಘನೆ ಮಾಡಿದ್ದೀರಿ. ಗ್ರಾಮೀಣ ಕೃಪಾಂಕದ ನೌಕರರನ್ನು ತೆಗೆದುಹಾಕಬೇಕೆಂಬ ರೀತಿಯಲ್ಲಿ ಮಾಡಿದ್ದೀರೆಂದು ಕೆಲವರು ಮತ್ತೆ ಕೋರ್ಟಿಗೆ ಅಪ್ರೋಚ್ ಆಗಿರುವುದಾಗಿ ತಿಳಿದು ಬಂದಿದೆ. ಆದ್ದರಿಂದ ಅದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಈ 13 ಸಾವಿರ ನೌಕರರನ್ನು ಯಾವ ರೀತಿಯಾಗಿ ಸರ್ಕಾರ ಸಂರಕ್ಷಣೆ ಮಾಡುವ ಬಗ್ಗೆ ಯಾವ ಕಾನೂನು ಕ್ರಮವನ್ನು ಕೈಗೊಳ್ಳುತ್ತದೆ ಎಂಬುದನ್ನು ಸ್ಪಷ್ಟೀಕರಣ ನೀಡಬೇಕು. ಇಲ್ಲದಿದ್ದರೆ ಇದರ ಬಗ್ಗೆ ಇಡೀ ರಾಜ್ಯದ ತುಂಬಾ ಗಲಿಬಿಲಿ ಉಂಟಾಗಿದೆ. ಮುಂದೆ ನಮ್ಮ ಪರಿಸ್ಥಿತಿ ಏನು ಎಂದು ಆ ನೌಕರರಲ್ಲಿ ಕೆಲವೊಬ್ಬರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗ ಬಂದಿದೆ. ನೀವು ಯಾವುದೇ ಕಾನೂನು ಮಾಡಿ ಯಾವುದೇ ರೀತಿ ಸಂರಕ್ಷಣೆ ಮಾಡಿದರೂ ಅದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ. ಆದಕ್ಕಾಗಿ ನೀವು ಅವರನ್ನು ಸಂರಕ್ಷಣೆ ಮಾಡುವ ಕೆಲಸವನ್ನು ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಗ್ರಾಮೀಣ ಕೃಪಾಂಕದ ಬಗ್ಗೆ ಪ್ರಾರಂಭದಿಂದಲೂ ಸಹಿತ ತಾತ್ಸಾರ ಮನೋಭಾವನೆಯನ್ನು ತಾಳಿರತಕ್ಕಂದದ್ದನ್ನು ಎಲ್ಲಾ ಹಂತಗಳಲ್ಲಿ ನಾವು ಗಮನಿಸಿದ್ದೇವೆ. ನಾವು ಅನೇಕ ಹಂತಗಳಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದರೂ ಸಹಿತ, ಇದರ ಬಗ್ಗೆ ಸರ್ಕಾರ ನಿರ್ದಿಷ್ಟವಾಗಿ ತಮ್ಮ ಧೋರಣೆಯನ್ನು ತಿಳಿಸುತ್ತಿಲ್ಲ. ಗ್ರಾಮೀಣ ಪ್ರದೇಶದ 13 ಸಾವಿರ ನೌಕರರ ಭವಿಷ್ಯ ಏಂದು ರೀತಿಯಾದರೆ, ಈಗ ಏನು ರೆಕ್ರೂಟ್‌ಮೆಂಟ್ ನಡೆಯುತ್ತಿದೆ, ಇದರಲ್ಲಿ ಕೂಡ ಗ್ರಾಮೀಣ ಪ್ರದೇಶದ ಮಕ್ಕಳಿಗೆ ವಂಚನೆಯಾಗುತ್ತಿರುವ ಬಗ್ಗೆ ನಾವು ಎಲ್ಲಾ ಹಂತಗಳಲ್ಲಿ ಇವತ್ತು ನೋಡುತ್ತಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರುಗಳನ್ನು ಕರೆದು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಸಭೆಗಳನ್ನು ಮಾಡುತ್ತಾರೆ, ನಂತರ ಸಭೆಗಳಲ್ಲಿ ತೀರ್ಮಾನಗಳಾಗುತ್ತವೆ, ಅದನ್ನು ಕಾರ್ಯಗತ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರದಿಂದ ಆಗುತ್ತಿಲ್ಲ. ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವನ್ನು ತಿಳಿಸಬೇಕೆಂದು ನಾವು ಒತ್ತಾಯ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆ ಈ ಸದನದಲ್ಲೂ ಆಗಿದೆ ಮತ್ತು ಇದರ ಬಗ್ಗೆ ಹೆಚ್ಚಿನ ಕಾಳಜಿಯನ್ನು ಕೂಡ ಸರ್ಕಾರ ವಹಿಸುತ್ತಿದೆ. ತಾವು ಕಾಳಜಿ ಇಲ್ಲವೆಂದು ಎಷ್ಟು ಸಾರಿ ಹೇಳಿದರೂ ಕೂಡ, ಗ್ರಾಮೀಣ ಕೃಪಾಂಕದ ಬಗ್ಗೆ ಮತ್ತು ಗ್ರಾಮೀಣ ಅಭ್ಯರ್ಥಿಗಳ ಬಗ್ಗೆ ಕಾಳಜಿ ತಮಗೆ ಎಷ್ಟು ಇದೆಯೋ ಅಷ್ಟೇ ಕಾಳಜಿ ನಮಗೂ ಕೂಡ ಇದೆ. ಆದರೆ ಅದನ್ನು ಯಾವ ರೀತಿಯಾಗಿ ಮಾಡಬೇಕು, ನಾಳೆ ಪುನ: ಸುಪ್ರೀಂಕೋರ್ಟ್‌ನಲ್ಲಿ ಅದನ್ನು ತಳ್ಳಿಹಾಕಬಾರದು, ಆ ದೃಷ್ಟಿಯಿಂದಲೇ ಇವತ್ತು ಬಹಳಷ್ಟು ಕೂಲಂಕಷವಾಗಿ ಕಾನೂನು ಇಲಾಖೆಯವರು ಪರಿಶೀಲನೆಯನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ವಿವರವಾದ ಮಾಹಿತಿಯನ್ನು ಉತ್ತರವನ್ನು ನಮ್ಮ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಮತ್ತು ಕಾನೂನು ಸಚಿವರು ಬಂದಮೇಲೆ ನಾನು: ಕೊಡಿಸುತ್ತೇನೆ.

ಆ) ಝಳಕಿಯಲ್ಲಿ ನಡೆದ ಗೋಲಿ ಬಾರ್ ಪ್ರಕರಣದ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೆ, ಈ ಝಳಕಿಯಲ್ಲಿ ಆದಂತಹ ಗೋಲಿ ಬಾರ್ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದೆವು. ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲನೇ ದಿನವೇ ಇದರ ಬಗ್ಗೆ ಪ್ರಸ್ತಾಪ ಮಾಡುವುದು

ಬೇಡ. ಏಕೆಂದರೆ, ಬರಗಾಲ ಇರುವುದರಿಂದಾಗಿ ಚರ್ಚೆಯನ್ನು ಮುಂದಕ್ಕೆ ಹಾಕೋಣ, ರಾಜ್ಯದಲ್ಲಿ ಬರಗಾಲ ಮತ್ತು ಬೆಳೆ ವಿಮೆಯ ಸಾಲದ ಸಮಸ್ಯೆ ಇದೆ. ಇವರು ಬೆಳೆ ವಿಮೆ ಹಣವನ್ನು ಬಿಡುಗಡೆ ಮಾಡಿರಲಿಲ್ಲ. ಅದಕ್ಕೋಸ್ಕರವಾಗಿ ಅದನ್ನು ಮೊದಲನೆಯ ದಿನ ತೆಗೆದುಕೊಂಡಿದ್ದೆವು. ಈಗ ಅಲ್ಲಿ ಗೋಲಿಬಾರ್‌ನಿಂದಾಗಿ 5 ಜನರು ಸತ್ತಿದ್ದಾರೆ, ಅಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಹೇಳುತ್ತಿದ್ದಾರೆ, ಅಲ್ಲಿಂದ ನಮಗೆ ಬಂದಿರುವ ಮಾಹಿತಿಯ ಪ್ರಕಾರ ಅದು ಆತ್ಮಹತ್ಯೆಯಲ್ಲ ಅದು ಮರ್ಡರ್ ಎಂದು ಬಂದಿದೆ. ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಅನೇಕ ಸಂದರ್ಭದಲ್ಲಿ ಕೇಳಿಕೊಂಡೆವು. ಇದರ ಬಗ್ಗೆ ಮಾನ್ಯ ಗೃಹಸಚಿವರು ಈಗಾಗಲೇ ಇದನ್ನು ನಾವು ಜ್ಯುಡಿಷಿಯಲ್ ಪ್ರೋಬ್‌ಗೆ ಆರ್ಡರ್ ಮಾಡಿದ್ದೇವೆ, ಅದಕ್ಕೋಸ್ಕರವಾಗಿ ಇದರ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ಅಭಿಪ್ರಾಯ ವ್ಯಕ್ತ ಮಾಡಿದರು. ಅದಾದ ಮೇಲೆ ತಾವು ಒಂದು ತೀರ್ಮಾನ ಕೊಟ್ಟರಿ ಅದೇನೆಂದರೆ, ಜ್ಯುಡಿಷಿಯಲ್ ಪ್ರೋಬ್ ಮಾಡುತ್ತೇವೆಂದು ಸರ್ಕಾರ ಹೇಳಿದೆ ಆಷ್ಟೆ ಜ್ಯುಡಿಷಿಯಲ್ ಪ್ರೋಬ್ ಇನ್ನು ಪ್ರಾರಂಭವಾಗಿಲ್ಲ. ಅದರಿಂದಾಗಿ ಇದನ್ನು ಚರ್ಚೆ ಮಾಡಬಹುದು ಎಂದು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ, ತಾವು ತುರ್ತಾಗಿ ಇದರ ಬಗ್ಗೆ ಅರ್ಧ ಗಂಟೆ, ಒಂದು ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಪ್ರತಿನಿತ್ಯವು ಸಹಿತ ಪೊಲೀಸ್‌ನವರಿಂದ ಅಲ್ಲಿ ಅನ್ಯಾಯವು ನಡೆಯುತ್ತಿದೆ. ಈ ಸರ್ಕಾರಕ್ಕೆ ಮತ್ತು ಮಾನ್ಯ ಮಂತ್ರಿಗಳಿಗೆ ಪೊಲೀಸ್ ಇಲಾಖೆಯ ಮೇಲೆ ಸಂಪೂರ್ಣವಾಗಿ ಹತೋಟಿ ತಪ್ಪಿಹೋಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅವರಿಗೆ ಹತೋಟಿ ಇದ್ದಿದ್ದರೆ ಪ್ರತಿನಿತ್ಯವು ಸಹಿತ ಅವ್ಯಾಹತವಾಗಿ ಆಗುತ್ತಿರಲ್ಲಿಲ್ಲ. ಮಾನ್ಯ ಅಧ್ಯಕ್ಷರೆ, ತಾವು ವಿಷಯದ ತೀವ್ರತೆಯನ್ನು ಮನಗಂಡು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ನಾನು ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಝಳಕಿಯಲ್ಲಿ ಆಗಿರತಕ್ಕಂತಹ ಪ್ರಕರಣ ಏನಿದೆ, ಅದು ಪೊಲೀಸರ ಮೇಲೆ, ಪೊಲೀಸ್ ಇಲಾಖೆಯ ಮೇಲೆ ಈ ಸರ್ಕಾರಕ್ಕೆ ಇರತಕ್ಕಂತಹ ಹತೋಟಿ ಎನ್ನತಕ್ಕಂತಹ ಪ್ರಶ್ನೆ. ಇದಾದನಂತರ ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರು ಒಂದು ಪ್ರಶ್ನೆಯನ್ನು ಎತ್ತಿದರು. ಒಬ್ಬ ಪ್ರತಿಭಾವಂತ ದಲಿತ ಯುವಕನ ಮೇಲೆ ಆಗಿರತಕ್ಕಂತಹ ಅನ್ಯಾಯಗಳ ಬಗ್ಗೆ ಹೇಳಿದರು. ಈ ರೀತಿಯಾಗಿ ಪ್ರತಿನಿತ್ಯವೂ ಸಹಿತ ನಡೆಯುತ್ತಿದೆ. ಈ ಬಗ್ಗೆ ಪತ್ರಿಕೆಗಳಲ್ಲೂ ಸಹ ವರದಿಯಾಗುತ್ತಿದೆ, ಇದರ ಬಗ್ಗೆ ಚರ್ಚೆಯಾಗದೆ ಹೋದರೆ ಸೀರಿಯಸ್ ಆಗಿ ಸರ್ಕಾರದ ಕಡೆಯಿಂದ ಒಂದು ಮೆಸೇಜ್ ಹೋಗದೆ ಹೋದರೆ ಇದೇ ರೀತಿಯಾಗಿ ನಡೆದುಕೊಂಡು ಹೋಗುತ್ತಿರುತ್ತದೆ. ಇದು ಎಲ್ಲೋ ಒಂದು ಕಡೆ ನಿಲ್ಲಬೇಕಲ್ಲವೇ? ಅದಕ್ಕೋಸ್ಕರವಾಗಿ ತಾವು ಆದಷ್ಟು ಬೇಗ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು: ನನ್ನ ರೂಲಿಂಗ್‌ನಲ್ಲಿ ನಾನು ಹೇಳಿದ ಪ್ರಕಾರ ಚರ್ಚೆಗೆ ಅವಕಾಶವನ್ನು ಮಡಿಕೊಡುತ್ತೇನೆಂದು ಹೇಳಿದ್ದೇನೆ. ಕಳೆದ ಏಳು ದಿವಸಗಳಿಂದ ಸರ್ಕಾರಿ ಕೆಲಸಗಳು ಏನೂ

ನಡೆದಿರುವುದಿಲ್ಲ. ಸರ್ಕಾರಿ ಕೆಲಸವನ್ನು ಸ್ವಲ್ಪ ಮಾಡೋಣ, ಅದನ್ನು ಆಲೋ ಮಾಡುತ್ತೇನೆ. ಈಗಾಗಲೇ ನಾನು ಹೇಳಿದ್ದೇನೆ. ದಯವಿಟ್ಟು ಕ್ಷಮಿಸಬೇಕು.

ಇ) ಛಾಪಾಕಾಗದದ ಪ್ರಮುಖ ಆರೋಪಿ ಕರೀಂಲಾಲ್ ಮತ್ತು ಅವರ ಹತ್ತಿರದ ಸಂಬಂಧಿಕರ ಮನೆ ಮೇಲೆ ಸಿ.ಒ.ಡಿ.ಧಾಳಿ ಕುರಿತು.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಪತ್ರಿಕೆಗಳಲ್ಲಿ ಒಂದು ವಿಚಾರವು ವರದಿಯಾಗಿದೆ. ಮಾನ್ಯ ಗೃಹಮಂತ್ರಿಗಳು ಗಮನಿಸಬೇಕು ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ 14-7-2002ರಂದು ಬಹುಕೋಟಿ ನಕಲಿ ಛಾಪಾಕಾಗದದ ಪ್ರಮುಖ ಆರೋಪಿ ಕರೀಂಲಾಲ್ ಮತ್ತು ಅವರ ಹತ್ತಿರದ ಸಂಬಂಧಿಕರ ಮನೆಯ ಮೇಲೆ ಸಿಒಡಿಯಿಂದ ಧಾಳಿಯಾಗಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈಗಾಗಲೇ ಇದರ ಬಗ್ಗೆ ಸಾಕಷ್ಟು ವಿಚಾರಗಳು ಸಾರ್ವತ್ರಿಕವಾಗಿ ಚರ್ಚೆಯಾಗಿದೆ. ಈ ಒಂದು ಸಿಒಡಿ ಧಾಳಿ ನಿಜವಾಗಿಯೂ ಆಗಿದೆಯೇ? ಇದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವುದೇನೆಂದರೆ, ಲ್ಯಾಪ್‌ಟ್ಯಾಪ್ ಕಂಪ್ಯೂಟರ್‌ಗಳು, ಸೀಡಿಗಳು, ಫೋಟೋ ಆಲ್ಬಂಗಳ ಮತ್ತು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆಂದು ಹೇಳುವಂತಹ ವಿಚಾರಗಳು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದರ ಹಿನ್ನೆಲೆ ಏನು? ಇದು ಬಹುಕೋಟಿ ಛಾಪಾ ಕಾಗದದ ಹಗರಣಕ್ಕೆ ಸಂಬಂಧಪಟ್ಟ ಹಾಗೆ ಸಿಒಡಿ ಧಾಳಿಯಾಗಿದೆಯೇ ಅಥವಾ ಬೇರೆ ಯಾವುದಾದರೂ ಆರೋಪದ ಮೇಲೆ ಸಿಕ್ಕಿಬಿದ್ದಿದ್ದಾರಾ? ಈ ಎಲ್ಲಾ ವಿಚಾರಗಳನ್ನು ತಾವು ಸದನಕ್ಕೆ ತಿಳಿಸುವಂಥದ್ದು ಅತ್ಯಂತ ಅವಶ್ಯಕತೆ ಇದೆ, ಏಕೆಂದರೆ ಕರ್ನಾಟಕ ರಾಜ್ಯದ ಅತ್ಯಂತ ದೊಡ್ಡ ಪ್ರಕರಣ ಬಹುಕೋಟಿ ಛಾಪಾ ಕಾಗದದ ಹಗರಣವಾಗಿದೆ. ಇದರ ಹಿನ್ನೆಲೆಯಲ್ಲಿ ಗೃಹ ಇಲಾಖೆಯವರು ಈ ವಿಚಾರವನ್ನು ಸದನಕ್ಕೆ ತಿಳಿಸಬೇಕೆಂಬ ಆಗ್ರಹವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು): ಈಗ ನನಗೆ ನೋಟೀಸ್ ಬಂದಿಲ್ಲ, ಇವತ್ತು ಅದು ಅಜೆಂಡಾದಲ್ಲಿ ಇಲ್ಲ, ಮಾನ್ಯ ಸದಾನಂದಗೌಡರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಈಗಾಗಲೇ ನಾವು ಒಂದು ಸ್ಪೆಷಲ್ ಟೀಮ್‌ನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಇದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ, ಈ ಮಧ್ಯದಲ್ಲಿ ನಾವು ಸವಿಸ್ತಾರವಾಗಿ ಚರ್ಚೆ ಮಾಡಬಹುದು ಸರಿಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಸಿಒಡಿಯವರು ಧಾಳಿ ಮಾಡಿದ್ದಾರೋ ಅಥವಾ ಇಲ್ಲವೋ; ಇಷ್ಟೇ ಮಾಹಿತಿಬೇಕಾಗಿದ್ದರೆ ನಾನು ತರಿಸಿಕೊಡುತ್ತೇನೆ.

ವಿಷಯ: ಈ) ತುರುವೇಕೆರೆ ಕ್ಷೇತ್ರದ ದಂಡೇಶ್ವರ ಹೋಬಳಿ ಸಂಪಿಗೆ ಹೊಸಹಳ್ಳಿ ಗ್ರಾಮದಲ್ಲಿ ಕಾಡಾನೆಗಳ ಹಾವಳಿಯಿಂದ ಯುವಕನೋರ್ವ ಹತ್ಯೆಗೊಂಡಿರುವ ಬಗ್ಗೆ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ(ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ದಂಡೇಶ್ವರದ ಹೋಬಳಿ ಸಂಪಿಗೆ ಹೊಸಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯೊಳಗೆ ಬರತಕ್ಕಂತಹ ಮಾರತಮ್ಮನಹಳ್ಳಿಯ ಗ್ರಾಮದಲ್ಲಿ ಮೊನ್ನೆ ರಾತ್ರಿ ಅನಿರೀಕ್ಷಿತವಾಗಿ ಕಾಡಿನಿಂದ ತಪ್ಪಿಸಿಕೊಂಡಂತಹ 5 ಆನೆಗಳು ಊರೊಳಗೆ ನುಗ್ಗಿ, ಊರಿನಲ್ಲಿ ದಾಂದಲೆಯನ್ನು ಮಾಡಿ, ತೋಟಗಳನ್ನು ಹಾಳು ಮಾಡಿ ಬೆಳಿಗ್ಗೆ ಸುಮಾರು 6-30 ಗಂಟೆಯ ಸಂದರ್ಭದಲ್ಲಿ 20 ದಿವಸಗಳ ಹಿಂದೆ